ಸಾರಾಯಿ ಗುತ್ತಿಗೆದಾರರಿಂದ ಬಾಕಿ ಇರುವ ಅಸಲು ಮತ್ತು ಬಡ್ಡಿ ಹಣ:

56 (42) **ಶ್ರೀ ಜಯಪ್ರಕಾಶ ಹೆಗಡೆ ಕೆ. (ಬ್ರಹ್ಮಾವರ):** ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿ ಶರಾಬು ಗುತ್ತಿಗೆದಾರರಿಂದ ಸರ್ಕಾರಕ್ಕೆ ಪಾವತಿಯಾಗಬೇಕಾಗಿರುವ ಅಸಲು ಮತ್ತು ಬಡ್ಡಿ ಹಣದ ಒಟ್ಟು ಮೊತ್ತ ಎಷ್ಟು; ಅವರ ಬಾಕಿ ಹಣಕ್ಕೆ ಬಡ್ಡಿಯನ್ನು ಮನ್ನಾ ಮಾಡಿರುವುದು ನಿಜವೇ; ಹಾಗಿದ್ದಲ್ಲಿ, ಬಡ್ಡಿ ಮನ್ನಾ ಮಾಡಲು ಕಾರಣಗಳೇನು;

2) ಗುತ್ತಿಗೆದಾರರಿಂದ ಬರಬೇಕಾದ ಹಣವನ್ನು ವಸೂಲು ಮಾಡಲು ಸರ್ಕಾರ ಯಾವ ಕ್ರಮವನ್ನು ಅನುಸರಿಸುತ್ತಿದೆ?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು)

1) ಸರ್ಕಾರಕ್ಕೆ ಬರಬೇಕಾಗಿರುವ ಬಾಕಿ ಈ ಕೆಳಕಂಡಂತಿದೆ:

ಅಸಲು - ರೂ. 152.19 ಕೋಟಿ.

ಬಡ್ಡಿ - ರೂ. 259.94 ಕೋಟಿ.

ಬಾಕಿ ಇರುವ ಹಣಕ್ಕೆ ಇನ್ನೂ ಬಡ್ಡಿಯನ್ನು ಮನ್ನಾ ಮಾಡಿರುವುದಿಲ್ಲ.

ಉದ್ಭವಿಸುವುದಿಲ್ಲ.

2) ಅ) ಕರ್ನಾಟಕ ಅಬಕಾರಿ ಕಾಯಿದೆ ತಿದ್ದುಪಡಿಯಾಗಿರುತ್ತದೆ ಈ ತಿದ್ದುಪಡಿಯ ರೀತ್ಯಾ ನ್ಯಾಯಾಲಯಗಳು ಅಬಕಾರಿ ಬಾಕಿ ವಸೂಲಾತಿಗೆ ಸಂಬಂಧಿಸಿದಂತೆ ಕಾಯಂ ಆಗಿ ಅಥವಾ ತಾತ್ಕಾಲಿಕವಾಗಿ ತಡೆಯಾಜ್ಞೆಯನ್ನು ನೀಡುವುದನ್ನು ಪ್ರತಿಬಂಧಿಸುತ್ತದೆ.

ಆ) ಭೂ ಕಂದಾಯ ಕಾಯಿದೆ ಅಡಿ ಬಾಕಿದಾರರ ಸ್ಥಿರ ಚರಾಸ್ತಿಗಳ ಮುಟ್ಟುಗೋಲಿಗೆ ಕಠಿಣ ಕ್ರಮ ಜರುಗಿಸಲು ಆಗಿಂದಾಗ್ಗೆ ಎಲ್ಲಾ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನಗಳನ್ನು ನೀಡಿದೆ.

ಇ) ಬಾಕಿ ಉಳಿದಿರುವ ಅಂಗಡಿ ಬಾಡಿಗೆಯನ್ನು ಪಾವತಿ ಮಾಡಲು ಮುಂದೆ ಬರುವ ಬಾಕಿದಾರರ ಬಡ್ಡಿಯನ್ನು ಮನ್ನಾ ಮಾಡುವ "ಕರ ಸಮಾಧಾನ" ಯೋಜನೆಯನ್ನು ಜಾರಿಗೊಳಿಸಲು ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳಿಗೆ ತಿದ್ದುಪಡಿ ತಂದಿದೆ. ಈ ಯೋಜನೆಯು ಇನ್ನೂ ಜಾರಿಗೆ ಬಂದಿರುವುದಿಲ್ಲ.

ವಿದ್ಯುತ್ ಸಂಪರ್ಕವನ್ನು ಸಕ್ರಮಗೊಳಿಸುವ ಕಾರ್ಯಕ್ರಮ:

57 (43) **ಶ್ರೀ ಜಯಪ್ರಕಾಶ ಹೆಗಡೆ ಕೆ. (ಬ್ರಹ್ಮಾವರ):** ಮಾನ್ಯ ಇಂಧನ ರಾಜ್ಯ ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ರಾಜ್ಯದಲ್ಲಿ ಅಕ್ರಮ ವಿದ್ಯುಚ್ಛಕ್ತಿ ಸಂಪರ್ಕವನ್ನು ಹೊಂದಿರುವ ಸಂಪರ್ಕಗಳನ್ನು ಸಕ್ರಮಗೊಳಿಸುವ ಯೋಜನೆಯಡಿಯಲ್ಲಿ ಎಷ್ಟು ಪ್ರಕರಣಗಳನ್ನು ಸಕ್ರಮೀಕರಿಸಲಾಗಿದೆ; ಸದರಿ ಯೋಜನೆಯನ್ನು ಮುಂದುವರಿಸುವ ಉದ್ದೇಶ ಸರ್ಕಾರದ ಮುಂದಿದೆಯೇ;

2) ರಾಜ್ಯದಲ್ಲಿನ ವಿದ್ಯುಚ್ಛಕ್ತಿಯ ಕೊರತೆಯು ಎಷ್ಟು ಪ್ರಮಾಣದಲ್ಲಿದೆ; ಅದನ್ನು ನೀಗಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು;

3) ವಿದ್ಯುಚ್ಛಕ್ತಿ ಉತ್ಪಾದನೆ ದಿಶೆಯಲ್ಲಿ ಕೈಗೊಳ್ಳಲಿರುವ ನೂತನ ಯೋಜನೆಗಳು ಯಾವುವು?

ಶ್ರೀ ವೀರಕುಮಾರ್ ಅ. ಪಾಟೀಲ್ (ಇಂಧನ ರಾಜ್ಯ ಸಚಿವರು)

1) ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಕ್ರಮೀಕರಣವನ್ನು ರಾಜ್ಯದಲ್ಲಿ 1-7-2000 ದಿಂದ 31-1-2001ರ ವರೆಗೆ ಮಾಡಲಾಗಿದ್ದು, ಈ ಅವಧಿಯಲ್ಲಿ ಒಟ್ಟು 47,822 ಅಕ್ರಮ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮೀಕರಿಸಲಾಗಿದೆ.

ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ನೀಡಿರುವ ಆದೇಶದ ಪ್ರಕಾರ, ಅಕ್ರಮ ನೀರಾವರಿ ಪಂಪುಸೆಟ್ಟುಗಳನ್ನು ಸಕ್ರಮೀಕರಣಗೊಳಿಸುವ ಅವಧಿಯನ್ನು 31-1-2001ರ ನಂತರ ವಿಸ್ತರಿಸಲು ಸಾಧ್ಯವಿರುವುದಿಲ್ಲ. ಆದುದರಿಂದ ಈ ಅವಧಿಯನ್ನು ವಿಸ್ತರಿಸುವ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ.

2) ಪ್ರಸಕ್ತ ವರ್ಷವಾದ 2000-2001ರ ಸಾಲಿನಲ್ಲಿ ರಾಜ್ಯವು ಅನುಭವಿಸುತ್ತಿರುವ ವಿದ್ಯುತ್ ಕೊರತೆಯ ಪ್ರಮಾಣ ಸುಮಾರು 1900 ದಶಲಕ್ಷ ಯೂನಿಟ್‌ಗಳು.

ವಿದ್ಯುತ್ ಕೊರತೆಯನ್ನು ನೀಗಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಅ) ಸಕ್ಕರೆ ಕಾರ್ಖಾನೆಗಳಲ್ಲಿಯೂ ಸಹಾ ಉತ್ಪಾದನೆಯಾಗಿ (Co-generation) ವಿದ್ಯುತ್ತನ್ನು ಉತ್ಪಾದಿಸಲು ಸರ್ಕಾರವು ಉತ್ತೇಜನ ನೀಡುತ್ತಿದೆ. ಇಂತಹ 6 ಕಾರ್ಖಾನೆಗಳಿಂದ ಸುಮಾರು 104 ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಅಲ್ಲದೇ ಖಾಸಗೀ ಕ್ಷೇತ್ರದಲ್ಲಿ ಕಿರು ಜಲ ವಿದ್ಯುತ್ ಮತ್ತು ಗಾಳಿ ಆಧಾರಿತ ವಿದ್ಯುತ್ ಯೋಜನೆಗಳ ಸರಬರಾಜಿಗೆ ಹೆಚ್ಚಿನ ಉತ್ತೇಜನವನ್ನು ನೀಡಲಾಗುತ್ತಿದೆ. ಪ್ರಸ್ತುತ 124.4 ಮೆಗಾ ವ್ಯಾಟ್‌ನಷ್ಟು ಕಿರು ಜಲ ವಿದ್ಯುತ್ ಮತ್ತು ಗಾಳಿ ಆಧಾರಿತ ವಿದ್ಯುತ್ ಯೋಜನೆಗಳನ್ನು ಖಾಸಗೀ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿವೆ.

ಆ) ಸುಮಾರು 8249 ಮೆಗಾ ವ್ಯಾಟ್‌ನಷ್ಟು ಸಾಮರ್ಥ್ಯದ ವಿದ್ಯುತ್ ಉತ್ಪಾದನೆಗೆ ಕರ್ನಾಟಕ ಸರ್ಕಾರವು ಖಾಸಗೀ ರಂಗದಲ್ಲಿ ಹಲವಾರು ಸಂಘ ಸಂಸ್ಥೆಗಳಿಗೆ ಅನುಮೋದನೆಯನ್ನು ನೀಡಿರುತ್ತದೆ. ಈಗಾಗಲೇ, ರಾಯಲ್ ಸೀಮಾ ಅಲ್ಕಲೀಸ್ ಲಿಮಿಟೆಡ್, ಬಳ್ಳಾರಿ ರವರು 28 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಯನ್ನು ನಿರ್ಮಾಣ ಮಾಡಿ ಕಾರ್ಯೋನ್ಮುಖಿಗೊಳಿಸಿರುತ್ತಾರೆ. ಟಾಟಾ ಪವರ್ ಕಂಪನಿಯು ಬೆಳಗಾವಿಯಲ್ಲಿ 81 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು, ಇದು ಮುಕ್ತಾಯದ ಹಂತದಲ್ಲಿರುತ್ತದೆ. ಮಂಗಳೂರಿನಲ್ಲಿ ತಣ್ಣೀರುಬಾವಿ ಕಂಪನಿಯು ಒಂದು

ಬಾರ್ಜ್ ಮೌಂಟೆಡ್ (ಸುಮಾರು 220 ಮೆಗಾ ವ್ಯಾಟ್) ವಿದ್ಯುತ್ ಯೋಜನೆಯನ್ನು ಕಾರ್ಯಗತಗೊಳಿಸುತ್ತಿದ್ದು, ಈ ಯೋಜನೆಯೂ ಸಹಾ ಮುಕ್ತಾಯದ ಹಂತದಲ್ಲಿರುತ್ತದೆ.

ಇ) ಹೊಸ ಸ್ವತಂತ್ರ ವಿದ್ಯುತ್ ಉತ್ಪಾದನಾ ಯೋಜನೆಗಳಿಂದ (Independent Power Producers) ಮಾಡಿಕೊಂಡ ವಿದ್ಯುತ್ ಖರೀದಿ ಒಪ್ಪಂದಗಳ ಪ್ರಕಾರ ವಿದ್ಯುತ್ತನ್ನು ಪಡೆಯಲಾಗುತ್ತಿದೆ.

ಈ) ಪೂರ್ವ ವಲಯದಲ್ಲಿ ಎನ್.ಟಿ.ಪಿ.ಸಿ. ಕೇಂದ್ರ ಘಟಕಗಳಿಂದ ಉತ್ಪಾದನೆಗೊಂಡ ವಿದ್ಯುತ್ತಿನ ದಿನವಹಿ ಸರಾಸರಿ 1.5 ರಿಂದ 2 ದಶಲಕ್ಷ ಯೂನಿಟ್ಟುಗಳ ಪ್ರಮಾಣದಲ್ಲಿ ಪಡೆಯಲಾಗುತ್ತಿದೆ.

ಉ) ಇತ್ತೀಚೆಗೆ ಗೇರುಸೊಪ್ಪದ ಜಲ ವಿದ್ಯುತ್ ಯೋಜನೆಯಲ್ಲಿ ಕರ್ನಾಟಕ ವಿದ್ಯುತ್ ನಿಗಮವು 60 ಮೆಗಾ ವ್ಯಾಟ್ ಸಾಮರ್ಥ್ಯದ ಮೊದಲ ವಿದ್ಯುತ್ ಉತ್ಪಾದನಾ ಘಟಕವನ್ನು ಕಾರ್ಯೋನ್ಮುಖಗೊಳಿಸಿ, ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸಿರುತ್ತದೆ.

3) ವಿದ್ಯುತ್ ಉತ್ಪಾದನೆಯನ್ನು ಖಾಸಗೀ ರಂಗಕ್ಕೆ ಮುಕ್ತಗೊಳಿಸಲಾಗಿದ್ದು ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸುಮಾರು 8,249 ಮೆಗಾ ವ್ಯಾಟ್‌ನಷ್ಟು ವಿದ್ಯುತ್ ಉತ್ಪಾದನೆಗೆ ಎಂ.ಓ.ಯು: ಸರ್ಕಾರಿ ಆದೇಶಗಳು ಮತ್ತು ಬಿಡ್ ಮಾರ್ಗದ ಮೂಲಕ ವಿವಿಧ ಖಾಸಗೀ ಕಂಪನಿಗಳಿಗೆ ಅನುಮೋದನೆ ನೀಡಿದ್ದು, ಇವು ವಿವಿಧ ಹಂತಗಳಲ್ಲಿರುತ್ತವೆ. ಈಗಾಗಲೇ ರಾಯಲ್ ಸೀಮೆ ಅಲ್ಕಲೀಸ್ ಲಿಮಿಟೆಡ್, ಬಳ್ಳಾರಿ ರವರು 28 ಮೆಗಾ ವ್ಯಾಟ್ ಸಾಮರ್ಥ್ಯದ ವಿದ್ಯುತ್ ನಿರ್ಮಾಣ ಕಾಮಗಾರಿಯನ್ನು ಪೂರ್ಣಗೊಳಿಸಿ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದೆ. ಟಾಟಾ ಪವರ್ ಕಂಪನಿ ಬೆಳಗಾವಿಯಲ್ಲಿ 81 ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು ಇದು ಮುಕ್ತಾಯದ ಹಂತವನ್ನು ತಲುಪಿರುತ್ತದೆ. ಶೀಘ್ರದಲ್ಲಿಯೇ ವಿದ್ಯುತ್ ಉತ್ಪಾದನೆಯನ್ನು ಪ್ರಾರಂಭಿಸುವ ನಿರೀಕ್ಷೆ ಇರುತ್ತದೆ. ಮಂಗಳೂರಿನಲ್ಲಿ ತಣ್ಣೀರ್ ಬಾವಿ ಪವರ್ ಕಂಪನಿಯು ಸುಮಾರು 220 ಮೆಗಾ ವ್ಯಾಟ್ ಸಾಮರ್ಥ್ಯದ ಬಾರ್ಜ್ ಮೌಂಟೆಡ್ ವಿದ್ಯುತ್ ಯೋಜನೆಯ ನಿರ್ಮಾಣ ಕಾರ್ಯವನ್ನು ಕೈಗೊಂಡಿದ್ದು ಇದೂ ಸಹಾ ಅಂತಿಮ ಘಟ್ಟದಲ್ಲಿರುತ್ತದೆ. ಬಾಕಿ ಉಳಿದ ಖಾಸಗೀ ಕಂಪನಿಗಳು, ಯೋಜನೆಯ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಕರ್ನಾಟಕ ವಿದ್ಯುತ್ ನಿಗಮವು ಕೈಗೊಳ್ಳಲಿರುವ ನೂತನ ಯೋಜನೆಗಳ ವಿವರ ಬಗ್ಗೆ ಸದರಿ ನಿಗಮದಿಂದ ವಿವರಗಳನ್ನು ಪಡೆಯಬೇಕಾಗಿರುತ್ತದೆ.

ಬೆಳಗಾಂವ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡದಲ್ಲಿ 33 ಕೆ.ವಿ. ಸ್ಟೇಷನ್ ಪ್ರಾರಂಭಿಸುವುದು:

59 (261) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

1) ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕಿನ ಮುರಗೋಡದಲ್ಲಿ 33 ಕೆ.ವಿ. ವಿದ್ಯುತ್ ಸ್ಟೇಷನ್ ಪ್ರಾರಂಭಿಸಲು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಿದ್ದರೂ ಇದುವರೆಗೂ ಕೆಲಸ ಪ್ರಾರಂಭಿಸದೇ ಇರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ;